ಈ ಬಗ್ಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಶ್ರೀ ಶ್ರೀನಿವಾಸ ಡಿಸ್ಟಿಲ್ಲರೀಸ್ ಪ್ರೈವೇಟ್ ಲಿಮಿಟೆಡ್, ಇವರಿಗೆ ದಿನಾಂಕ: 14-3-2001 ರಂದು ಕಾರಣ ಕೇಳುವ ನೋಟೀಸ್‌ನ್ನು ನೀಡಲಾಗಿರುತ್ತದೆ. ಇದಕ್ಕೆ ಪ್ರತ್ಯುತ್ತರವಾಗಿ ಉದ್ದಿಮೆದಾರರು ಮಂಡಳಿಗೆ ಪತ್ರ ಬರೆದು, ಉದ್ದಿಮೆಯ ಸ್ಥಾಪನೆಗೆ ಸಂಬಂಧಿಸಿದಂತೆ ಪ್ರಾಥಮಿಕ ಕಾಮಗಾರಿಗಳಾದ ಕಾಂಪೌಂಡ್ ಗೋಡೆ, ರಸ್ತೆ ಗುರುತು ಮಾಡುವ ಕೆಲಸಗಳನ್ನು ಮಾತ್ರ ಕೈಗೊಳ್ಳಲಾಗಿದೆಯೆಂದು, ಹಾಗೂ ಯಾವುದೇ ಪ್ರಮುಖ ಕಟ್ಟಡ ಕಾಮಗಾರಿಗಳನ್ನು ಕೈಗೊಂಡಿಲ್ಲವೆಂದೂ, ಮಂಡಳಿಯ ಸಮ್ಮತಿ ಇಲ್ಲದೇ ಯಾವುದೇ ಕಾಮಗಾರಿಗಳನ್ನು ಪ್ರಾರಂಭಿಸುವುದಿಲ್ಲವೆಂದೂ, ಪತ್ರದ ದಿನಾಂಕ: 15-3-2001ರ ಪತ್ರದಲ್ಲಿ ತಿಳಿಸಿರುತ್ತಾರೆ.

2. ಮಂಡಳಿಯ ನಿರಾಪೇಕ್ಷಣಾ ಪತ್ರವನ್ನು ಮತ್ತು ಸರ್ಕಾರದಿಂದ ಪರಿಸರ ವಿಮೋಚನಾ ಪತ್ರ ಪಡೆಯದೇ ಮಧ್ಯ ತಯಾರಿಕೆ ಉದ್ದಿಮೆಯನ್ನು ಪ್ರಾರಂಭ ಮಾಡುವಂತಿರುವುದಿಲ್ಲ.

*ಶಿವಮೊಗ್ಗ ನಗರದ ಮಹಾತ್ಮಗಾಂಧಿ ಉದ್ಯಾನವನ ಮತ್ಸಾಲಯ ನಿರ್ಮಾಣ.*

2204(2202) ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) :— ಮಾನ್ಯ ಮೀನುಗಾರಿಕೆ ಬಂದರು ಹಾಗೂ ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಶಿವಮೊಗ್ಗ ನಗರದ ಮಹಾತ್ಮಗಾಂಧಿ ಉದ್ಯಾನವನದ ಮತ್ಸ್ಯಾಲಯ ನಿರ್ಮಾಣದ ಕಾಮಗಾರಿಯನ್ನು ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮ (ನಿ)ಬೆಂಗಳೂರು ಇವರು ನಿರ್ವಹಿಸುತ್ತಿದ್ದು ಇದರ ಕಾಮಗಾರಿಯು ಅನುದಾನದ ಕೊರತೆಯಿಂದ ಸ್ಥಗಿತಗೊಂಡಿದೆಯೇ?

ಆ) ಮತ್ಸ್ಯಾಲಯ ನಿರ್ಮಾಣದ ಕಾಮಗಾರಿಗೆ ಸರ್ಕಾರ ಹಣ ಬಿಡುಗಡೆ ಮಾಡಿದೆಯೇ?

ಇ) ಮತ್ಸ್ಯಾಲಯ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು? (ವಿವರ ನೀಡುವುದು)

ಶ್ರೀ ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು) :—

ಅ) ಇಲ್ಲ

ಆ) ಹೌದು

ಇ) ಈ ಕಾಮಗಾರಿಯ ಅಂದಾಜು ವೆಚ್ಚ ರೂ. 16,62,280-00ಗಳಲ್ಲಿ ಇದುವರೆಗೆ ರೂ. 12,91,600-00 ಬಿಡುಗಡೆ ಮಾಡಲಾಗಿದೆ. ಕಾಮಗಾರಿಗಳನ್ನು ಹಾಲಕ್ರಮೇಣ ಪೂರ್ಣಗೊಳಿಸಲಾಗುವುದು.?